ಕಟ್ಟಡ ಕಾರ್ಮಿಕರ ಸವಲತ್ತು ನೀಡುವಲ್ಲಿ ವಿಳಂಬ

65 (380); ಶ್ರೀ ಪ್ರಮೋದ್ ಮಧ್ವರಾಜ್ (ಉಡುಪಿ)

ಅ) ರಾಜ್ಯದಲ್ಲಿ ಕಟ್ಟಡ ಕಾರ್ಮಿಕರ ನಿಧಿಯಿಂದ ಸಂಗ್ರಹವಾದ ಹಣವೆಷ್ಟು; (ವಿವರ ನೀಡುವುದು)

ಆ) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಯಾವ ಯಾವ ಸವಲತ್ತುಗಳನ್ನು ಸರ್ಕಾರದಿಂದ ನೀಡಲಾಗುತ್ತಿದೆ;

ಇ) ಈ ಕಾರ್ಮಿಕರಿಗೆ ಪಿಂಚಣಿ, ವೈದ್ಯಕೀಯ ಸೌಲಭ್ಯ, ವಿದ್ಯಾರ್ಥಿ ವೇತನ ಇತ್ಯಾದಿಗಳನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ನಿರ್ಮಾಣಗಳ ವೆಚ್ಚದ ಮೇಲೆ ಶೇಕಡ ಒಂದರಷ್ಟು (1%) ದರದಲ್ಲಿ 2007 ರಿಂದ ಡಿಸೆಂಬರ್ 2014 ರ ವರೆಗೆ ಒಟ್ಟು ₹ 2544,73,73,788/– ಗಳನ್ನು ಸುಂಕವಾಗಿ (ಸೆಸ್) ಸಂಗ್ರಹ ಮಾಡಲಾಗಿರುತ್ತದೆ.

Building and Other construction workers welfare Board has collected a sum of ₹ 2544,73,73,788/- as cess at the rate of one percent on the cost of construction from 2007 to December 2014.

ಆ) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೋಸ್ಕರ 12 ಕಲ್ಯಾಣ ಯೋಜನೆಗಳನ್ನು ರೂಪಿಸಿದ್ದು, ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ನೋಂದಾಯಿತರಲ್ಲದ ಕಾರ್ಮಿಕರು ಕಟ್ಟಡ ನಿರ್ಮಾಣ ಹಂತದಲ್ಲಿ ಕಟ್ಟಡ ಕುಸಿತದಿಂದ ಅಪಘಾತವುಂಟಾಗಿ ಮೃತರಾದಲ್ಲಿ ಅವರ ಅವಲಂಬಿತರಿಗೆ ವಿಶೇಷವಾಗಿ ₹ 50,000/– ಗಳ ಧನಸಹಾಯ ಮತ್ತು ಗಂಭೀರವಾಗಿ ಗಾಯಗೊಂಡಲ್ಲಿ ₹ 10,000/– ಗಳನ್ನು ನೀಡಲಾಗುತ್ತದೆ.

Building and Other Construction Workers' Welfare Board has formulated 12 welfare Schemes to construction workers. Details are shown at Annexure-1.

In case, unregistered workers, dies due to collapse of building under construction, the dependents of the deceased workers will be paid ₹ 50,000/- as Ex-gratia and in case of serious injuries, a sum of ₹ 10,000/- will be paid to the worker.

ಇ) ಕಟ್ಟಡ ಕಾರ್ಮಿಕರಿಗೆ ಪಿಂಚಣಿ, ವೈದ್ಯಕೀಯ ಸೌಲಭ್ಯ, ವಿದ್ಯಾರ್ಥಿ ವೇತನ ಇತ್ಯಾದಿ ಸೌಲಭ್ಯಗಳನ್ನು ನೀಡುವಲ್ಲಿ ಕೆಲವು ಕಡೆ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಲು ಅರ್ಜಿಗಳನ್ನು ಶೀಘ್ರವಾಗಿ ವಿಲೇ ಮಾಡಲು ಸೌಲಭ್ಯಗಳ ಮಂಜೂರಾತಿ ಅಧಿಕಾರ ವಿಕೇಂದ್ರೀಕರಣ ಮಾಡಿದ್ದು, ಪ್ರಸ್ತುತ ಈ ಸೌಲಭ್ಯಗಳನ್ನು ಜಿಲ್ಲಾ ಕೇಂದ್ರದಲ್ಲೇ ಪಡೆಯುವಂತೆ ಕ್ರಮ ವಹಿಸಲಾಗಿದೆ.

It has come to the notice of the Government, that there are delays in disbursement of Pension, Medical and Education Assistance etc. in certain places. In order to overcome the delay, sanctioning powers have been decentralized. At present benefits can be availed at the district headquarters.

ಅನುಬಂಧ–1

ನೋಂದಾಯಿಸಿದ ತಕ್ಷಣ ಫಲಾನುಭವಿಗೆ ಸಿಗುವ ಸೌಲಭ್ಯಗಳು

1. ಒಳರೋಗಿ **ಧನಸಹಾಯ: ₹ 400/–** ರಿಂದ **₹ 6,000/–** ವರೆಗೆ.
2. **ಅಪಘಾತ ಪರಿಹಾರ:** ಕೆಲಸದಿಂದುಂಟಾದ ಮರಣ ಅಥವಾ ಸಂಪೂರ್ಣ **ಶಾಶ್ವತ ಅಂಗವಿಕಲರಾದಲ್ಲಿ ₹ 2,00,000/–**

   ಭಾಗಶಃ ಶಾಶ್ವತ ಅಂಗವಿಕಲರಾದಲ್ಲಿ ಅಂಗವಿಕಲತೆಯ ಪ್ರಮಾಣದ ಶೇಕಡಾವಾರು ಆಧಾರದ ಮೇಲೆ ಪರಿಹಾರ.
3. **ಪ್ರಮುಖ ವೈದ್ಯಕೀಯ ಧನಸಹಾಯ:** ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆಗಳಿಗೆ **₹ 2,00,000/–** ವರೆಗೆ. (ಸಿ.ಜಿ.ಹೆಚ್.ಎಸ್ ದರಗಳಿಗೆ ಒಳಪಟ್ಟು)
4. **ಅಂಗವಿಕಲತೆ ಪಿಂಚಣಿ:** ಕುಷ್ಠರೋಗ, ಕ್ಯಾನ್ಸರ್, ಪಾರ್ಶ್ವವಾಯು, ಟಿ.ಬಿ. ಕಾಯಿಲೆಗಳಿಂದ ಶಾಶ್ವತ ಅಂಗವಿಕಲತೆ ಹೊಂದಿದ ಫಲಾನುಭವಿಗೆ ಮಾಸಿಕ **₹ 500/–** ಪಿಂಚಣಿ ಹಾಗೂ ಅಂಗವಿಕಲತೆಯ ಪ್ರಮಾಣವನ್ನು ಆಧರಿಸಿ **₹ 5,000/–** ವರೆಗೆ ಎಕ್ಸ್‌ಗ್ರೇಷಿಯಾ ಧನಸಹಾಯ.

5. **ನೋಂದಾಯಿತರಲ್ಲದ ನಿರ್ಮಾಣ ಕಾರ್ಮಿಕರಿಗೆ ಎಕ್ಸ್‌ಗ್ರೇಷಿಯಾ:** ನಿರ್ಮಾಣ ಹಂತದಲ್ಲಿರುವ ಕಟ್ಟಡ ಕುಸಿತದಿಂದ ಅಪಘಾತ ಉಂಟಾಗಿ **ಮೃತರಾದಲ್ಲಿ** ಅವರ ಕುಟುಂಬಕ್ಕೆ **₹ 50,000/–** ಮತ್ತು **ಗಂಭೀರ ಗಾಯಗೊಂಡ** ಕಟ್ಟಡ ಕಾರ್ಮಿಕರಿಗೆ **₹ 10,00/–.**

6. **ಸ್ವಾಭಾವಿಕ ಮರಣ:** ಅಂತ್ಯಕ್ರಿಯೆ ವೆಚ್ಚ **₹ 4,000/–** ಹಾಗೂ ಎಕ್ಸ್‌ಗ್ರೇಷಿಯಾ **₹ 50,000/–** ಧನಸಹಾಯ.

<u>ಒಂದು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯಗಳು</u>

7. **ಹೆರಿಗೆ ಸೌಲಭ್ಯ:** ಮಹಿಳಾ ಫಲಾನುಭವಿಗೆ ಮೊದಲ ಎರಡು ಹೆರಿಗೆಗಳಿಗೆ ತಲಾ **₹ 15,000/–**

8. **ಶೈಕ್ಷಣಿಕ ಧನಸಹಾಯ:** ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

   i) 5, 6 ಹಾಗೂ 7ನೇ ತರಗತಿಯಲ್ಲಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ **₹ 2,000/–**

   ii) 8 ಹಾಗೂ 9ನೇ ತರಗತಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ **₹ 3,000/–**

   iii) ಎಸ್.ಎಸ್.ಎಲ್.ಸಿ. ಓದುತ್ತಿರುವವರಿಗೆ **₹ 5,000/–**

   iv) ಪ್ರಥಮ ಅಥವಾ ದ್ವಿತೀಯ ಪಿ.ಯು.ಸಿ. ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ **₹ 5,000/–**

   v) ಐಟಿಐ/ಡಿಪ್ಲೋಮಾ ಓದುತ್ತಿರುವವರಿಗೆ **₹ 5,000/–**

   vi) ಪದವಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ **₹ 5,000/–**

   vii) ಸ್ನಾತಕೋತ್ತರ ಪದವಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ **₹ 15,000/–**

   viii) ವೈದ್ಯಕೀಯ/ಇಂಜಿನಿಯರಿಂಗ್ ಪದವಿ ಓದುತ್ತಿರುವವರಿಗೆ ಸರ್ಕಾರವು ಅರ್ಹತೆಯ ಸ್ಥಾನಕ್ಕೆ ನಿಗಧಿ ಪಡಿಸಿದ ಶುಲ್ಕ

ಪಾವತಿ ಮತ್ತು ಪ್ರತಿ ತಿಂಗಳಿಗೆ ₹ **1,000/–** ಗಳ ಹಾಜರಾತಿ ಭತ್ಯೆ.

9. **ವೈವಾಹಿಕ ಧನಸಹಾಯ:** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳಿಗೆ ₹ **50,000/–**

<u>ಎರಡು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯಗಳು</u>

10. ಉಪಕರಣಗಳ ಖರೀದಿಗೆ ಧನಸಹಾಯ: ₹ **5,000/–** ವರೆಗೆ

<u>ಐದು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯಗಳು</u>

11. ಪಿಂಚಣಿ ಯೋಜನೆ

12. ಮನೆ ಕಟ್ಟುವುದಕ್ಕೆ/ಖರೀದಿಸುವುದಕ್ಕೆ ಧನಸಹಾಯ.

Annexure-1

Benefits available immediately after Registration

1. ₹ **400/-** to ₹ **6,000/-:** Hospitalization Assistance to the beneficiary.

2. ₹ **2,00,000/-:** Compensation payable to the nominees of the beneficiary on account of his death due to accident during the course of employment or while travelling from the place of work to the residence or from the residence to the place of work or resulting in total permanent disablement ₹ 50,000/- for the dependents and ₹ 1,50,000/- deposited in the monthly income scheme of the post office and for partial permanent disablement in proportion of ₹ 2,00,000/- based on the percentage of disability.

3. Upto ₹ **2,00,000/-:** Treatment of Major Ailments viz. Heart Operation, Kidney Transplantation and Cancer, Eye Operation, Paralysis, Orthopedics Operation, Uterus Operation, Asthma, Miscarriage, Gall Bladder Ailments, Kidney Stone Removal, Brain Hemorrhage, Ulcer, Dialysis, Kidney Related Surgery, ENT Treatment & Surgery, Neurosurgery, Vascular Surgery, Esophagus Treatment & Surgery, Gastrointestinal Surgery, Breast Related Treatment and Surgery, Hernia Surgery, Appendix Surgery, Treatment of Factures / Dislocation, General Surgery. (Subject to C.G.H.S. Rates)

4. Disability pension ₹ **500/-** p.m. due to Paralysis, Leprosy, Cancer and T.B. ₹ **5,000/-** ex-gratia based on percentage of disability.

5. ₹ **50,000/-:** Compensation payment to the unregistered beneficiary resulting in accidental death due to collapse of a building under construction. ₹ **10,000/-** compensation payable to the unregistered beneficiary who is grievously injured due to said type of accident.

6. ₹ **4,000/-:** Funeral expenses & ₹ **50,000/-** Ex-gratia to the deceased's family.

Benefits available after one year of Registration:

7. ₹ **15,000/-:** Maternity Assistance per delivery to female beneficiary limited to two deliveries.

8. Education Assistance: (Limited to 2 children only).
   i) ₹ **2,000/-** each year for studying 5th, 6th & 7th
   ii) ₹ **3,000/-** for studying in 8th & 9th

iii) ₹ **5,000/-** for studying in S.S.L.C.

iv) ₹ **5,000/-** each year Pass in I & II PUC.

v) ₹ **5,000/-** each year studying in ITI / Diploma.

vi) ₹ **5,000/-** each year studying in General Degree.

vii) ₹ **15,000/-** each year studying in PG course.

viii) Term fee prescribed by the State Government for the merit seat & ₹ **1,000/-** P.M. as attendance allowance for studying Medical/Engineering course.

9. ₹ **5,000/-:** Marriage Assistance to the beneficiary or to his 2 children.

Benefits available after Two years of Registration:

10. ₹ **5,000/-:** Assistance for purchase of tool/instruments.

Benefits available after Five Years of Registration:

11. Pension.

12. Assistance for Construction / Purchase of House.

ಶ್ರೀ ಪ್ರಮೋದ್ ಮಧ್ವರಾಜ್:– ಅಧ್ಯಕ್ಷರೆ, ಕಟ್ಟಡ ನಿರ್ಮಾಪಕರಿಂದ 1% ಪ್ರಕಾರ 2,544 ಕೋಟಿ ರೂಪಾಯಿಗಳು ಸಂಗ್ರಹವಾಗಿದೆ. ಆದರೆ, ಅದು ಸಮಂಜಸವಾಗಿ ಕಾರ್ಮಿಕರಿಗೆ ಸಂಕಷ್ಟದ ಕಾಲದಲ್ಲಿ ಸಿಗುತ್ತಿಲ್ಲ. ಅದಕ್ಕೆ ಬೇಕಾದಂಥ ಪ್ರಚಾರ ಕೂಡ ಮಾಡಿಲ್ಲ. ಈ ಬಗ್ಗೆ ಕಾರ್ಮಿಕರಿಗೆ ಪ್ರಚಾರ ಮಾಡಿ ನೋಂದಾವಣಿ ಮಾಡಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಮತ್ತು ಈ ಎಲ್ಲಾ 12 welfare schemes ಗಳನ್ನು ಕಾರ್ಮಿಕರಿಗೆ ಸರಿಯಾದ ಸಮಯದಲ್ಲಿ ಮುಟ್ಟಿಸುವ ದೃಷ್ಟಿಯಿಂದ, ಇದನ್ನು ಸಕಾಲ ಯೋಜನೆಗೆ ಸೇರ್ಪಡೆಗೊಳಿಸಲಾಗಿದೆಯೆ ಎನ್ನತಕ್ಕಂಥ ಸ್ಪಷ್ಟೀಕರಣವನ್ನು ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಪಿ.ಟಿ. ಪರಮೇಶ್ವರನಾಯ್ಕ:– ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ತಮ್ಮ ಮೂಲಕ ಸರ್ಕಾರದ ಗಮನ

ಸೆಳೆದಿದ್ದಾರೆ. ಇದು 1996 ರಲ್ಲಿ ಬಂದಂಥ ಕಾಯ್ದೆ. 2007 ರಿಂದ 2013 ರವರೆಗೆ ಒಟ್ಟು 6 ವರ್ಷಗಳಲ್ಲಿ 1,400 ಕೋಟಿ ಸೆಸ್ ಸಂಗ್ರಹವಾಗಿತ್ತು. ನಮ್ಮ ಸರ್ಕಾರ ಬಂದ ಮೇಲೆ 2013 ರಿಂದ 2015 ರವರೆಗೆ 1,165 ಕೋಟಿ ಸೇರಿದಂತೆ ಒಟ್ಟು 2,565 ಕೋಟಿ ರೂಪಾಯಿಗಳ ಸೆಸ್‌ನ್ನು ಸಂಗ್ರಹಿಸಲಾಗಿದೆ. ಅದರಲ್ಲಿ ನಮಗೆ ಆ ದುಡ್ಡಿಗೆ 522 ಕೋಟಿ ಬಡ್ಡಿ ಬಂದಿದೆ.

ಅಧ್ಯಕ್ಷರು:– ಆಯಿತು ದುಡ್ಡು ಖಜಾನೆಯಲ್ಲಿದೆ. ಅವರು ಹೇಳಿದ್ದು ಏನೆಂದರೆ,

ಶ್ರೀ ಪಿ.ಟಿ. ಪರಮೇಶ್ವರನಾಯ್ಕ:– ಅದಕ್ಕೆ ಬರುತ್ತೇನೆ ಅಧ್ಯಕ್ಷರೆ, 3,067 ಕೋಟಿ ರೂಪಾಯಿಗಳು ನಮ್ಮ Board ನಲ್ಲಿದೆ. ಮಾನ್ಯ ಮಧ್ವರಾಜ್‌ರವರು, ಇದು ಸರಿಯಾಗಿ ಪ್ರಚಾರವಾಗುತ್ತಿಲ್ಲ, ಸಮಯಕ್ಕೆ ಸರಿಯಾಗಿ ಪರಿಹಾರ ಸಿಗುತ್ತಿಲ್ಲ ಎನ್ನುವ ವಿಚಾರವನ್ನು ತಮ್ಮ ಮೂಲಕ ಪ್ರಶ್ನೆ ಕೇಳಿ ಸರ್ಕಾರದ ಗಮನ ಸೆಳೆದಿದ್ದಾರೆ. ಪ್ರಚಾರ ಮಾಡಲಿಕ್ಕೆ ಈಗಾಗಲೇ ನಾವು ಎಲ್ಲಾ ರೀತಿಯ ಕ್ರಮ ವಹಿಸಿದ್ದೇವೆ. ಜೊತೆಗೆ ಅವರು ವಿಳಂಬವಾಗಿದೆ ಎಂದು ಏನು ಹೇಳಿದರು ಅದು ಸರಿಯಿದೆ. ಅದು ಕೇಂದ್ರ ಕಛೇರಿಯಲ್ಲಿ ಆ ಅಧಿಕಾರ ಕೇಂದ್ರೀಕೃತವಾಗಿದ್ದು ಅದನ್ನು bifurcation ಮಾಡಿ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆ ಅಧಿಕಾರವನ್ನು ಹಸ್ತಾಂತರ ಮಾಡಿದ್ದೇವೆ. ಪ್ರಾರಂಭದಲ್ಲಿ ಅದು ಸ್ವಲ್ಪ ವಿಳಂಬವಾಗಿದೆ. ಕೂಡಲೇ ಅದನ್ನು ಸರಿಪಡಿಸಿ ಸಮಯಕ್ಕೆ ಸರಿಯಾಗಿ ಅವರಿಗೆ ಪರಿಹಾರ ಸಿಗುವಂಥದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರಮೋದ್ ಮಧ್ವರಾಜ್:– ಇದನ್ನು 'ಸಕಾಲ'ಕ್ಕೆ ಸೇರಿಸಿದ್ದೀರಾ ಎಂದು ಕೇಳಿದ್ದೇನೆ. ಇದನ್ನು 'ಸಕಾಲ' ಯೋಜನೆಗೆ ಸೇರ್ಪಡೆ ಗೊಳಿಸಲಾಗಿದೆಯೇ? ಈ ಯೋಜನೆಯನ್ನು ಸೇರ್ಪಡೆಗೊಳಿಸಿದರೆ ಕಾಲಬದ್ಧವಾಗಿ ಅದನ್ನು ಇತ್ಯರ್ಥ ಮಾಡಲಿಕ್ಕಾಗುತ್ತದೆ.

ಅಧ್ಯಕ್ಷರು:– 'ಸಕಾಲ'ದಲ್ಲಿ ಸೇರಿಸಿದ್ದೀರಾ ಎಂದು ಅವರ ಪ್ರಶ್ನೆ.

ಶ್ರೀ ಪಿ.ಟಿ. ಪರಮೇಶ್ವರನಾಯ್ಕ:– ಅವರು ಪ್ರಶ್ನೆಯಲ್ಲಿ 'ಸಕಾಲ'ದ ಬಗ್ಗೆ ಪ್ರಸ್ತಾಪಿಸಿಲ್ಲ. ಅದು ನಮ್ಮ ಮುಂದೆ ಇಲ್ಲ.

ಶ್ರೀ ಜಗದೀಶ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಅಸಂಘಟಿತ ಕಾರ್ಮಿಕರು ಬಹಳ ದೊಡ್ಡ ಪ್ರಮಾಣದಲ್ಲಿ ಇರುವಂಥ ವರ್ಗವಿದೆ. ಅದಕ್ಕಾಗಿ ಸಾವಿರಾರು ಕೋಟಿ ರೂಪಾಯಿ ತಮ್ಮಲ್ಲಿ ಇದೆ. ಅದನ್ನು ಸರಿಯಾಗಿ ಉಪಯೋಗ ಮಾಡಬೇಕಾಗಿದೆ. ಜಿಲ್ಲೆಗಳಲ್ಲಿ ಇದನ್ನು ಉಸ್ತುವಾರಿ ಮಾಡುವಂಥವರಿಲ್ಲ ಮತ್ತು ಅದನ್ನು ಖರ್ಚು ಮಾಡುವುದಕ್ಕಾಗುತ್ತಿಲ್ಲ. ಹೀಗಾಗಿ ಅಲ್ಲಿ ಅವರಿಗೆ ಏನು benefits ಸಿಗಬೇಕಾಗಿತ್ತು ಅದು ಆಗುತ್ತಿಲ್ಲ. ಅದಕ್ಕಾಗಿ ನೀವು ಸ್ವಲ್ಪ ತೀವ್ರಗತಿಯಲ್ಲಿ ಇದರ ಬೆನ್ನು ಹತ್ತಿದರೆ ಕಟ್ಟಡ ಕಾರ್ಮಿಕರಿಗೆ ಬಹಳ ಅನುಕೂಲವಾಗುತ್ತದೆ. ಇಂದು ಲಕ್ಷಾಂತರ ಅಸಂಘಟಿತ ಕಾರ್ಮಿಕರಿದ್ದಾರೆ. ಇವರಿಗೆ benefits ಆಗಲಿಕ್ಕೆ ಸಾಧ್ಯವಿದೆ. ಈ ಹಣವನ್ನು ಸದ್ಬಳಕೆ ಮಾಡಿ ಜಿಲ್ಲೆಯಲ್ಲಿ ಒಬ್ಬರನ್ನು ಉಸ್ತುವಾರಿ ನೋಡಿಕೊಳ್ಳುವಂಥವರನ್ನು ಇಡಿ. ಅಂದರೆ, ಆ ಹಣ ಸದ್ಬಳಕೆಯಾಗುತ್ತದೆ.

ಶ್ರೀ ಸಿ.ಟಿ. ರವಿ:– ಸತ್ತರೆ 50 ಸಾವಿರ, ಅಪಘಾತವಾದರೆ 10 ಸಾವಿರ ಪರಿಹಾರ ಕೊಡುವುದು ವೈಜ್ಞಾನಿಕವಾಗಿಲ್ಲ. ಅಪಘಾತವಾದಾಗ 10 ಸಾವಿರ ಕೊಟ್ಟರೆ ಯಾವ ಚಿಕಿತ್ಸೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ? ಅದಕ್ಕಾಗಿ ಪರಿಹಾರ ಮೊತ್ತವನ್ನು ಹೆಚ್ಚು ಮಾಡಬೇಕು.

ಶ್ರೀ ಪ್ರಮೋದ್ ಮಧ್ವರಾಜ್:– ಅದು ನೋಂದಾವಣೆ ಮಾಡದೇ ಇರುವವರಿಗೆ.

ಶ್ರೀ ಪಿ.ಟಿ. ಪರಮೇಶ್ವರನಾಯ್ಕ:– ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಕಟ್ಟಡ ಕಾರ್ಮಿಕರ ಬಗ್ಗೆ ಕಳಕಳಿ ವ್ಯಕ್ತಪಡಿಸಿದ್ದಾರೆ. ಹಿಂದೆ, 2007 ರಿಂದ 2013 ರ ವರೆಗೆ ಕೇವಲ 3 ಲಕ್ಷ ಸಾವಿರ ಕಟ್ಟಡ ಕಾರ್ಮಿಕರನ್ನು ನೋಂದಾವಣೆ ಮಾಡಲಾಗಿತ್ತು. 2013 ರಿಂದ 2015 ರ ವರೆಗೆ ಕೇವಲ ಒಂದೂ ಮುಕ್ಕಾಲು ವರ್ಷದಲ್ಲಿ 3 ಲಕ್ಷದ 89 ಸಾವಿರ ಕಟ್ಟಡ ಕಾರ್ಮಿಕರನ್ನು ಗುರುತಿಸಿ ನೋಂದಾವಣೆ ಮಾಡಿಸುವಂಥ ಕೆಲಸ

ಮಾಡಿದ್ದೇವೆ. ಒಟ್ಟು 6,93,632 ಜನ ಕಟ್ಟಡ ಕಾರ್ಮಿಕರನ್ನು ಗುರುತಿಸಿ ನೋಂದಾವಣಿ ಮಾಡಲಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಅವರಿಗೆ ಸೌಲಭ್ಯಗಳು ಸಿಗುತ್ತಿಲ್ಲ ಎನ್ನುವ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅದು ಕೇಂದ್ರ ಕಛೇರಿಗೆ ಸೀಮಿತವಾಗಿತ್ತು. ನಮ್ಮ ಕಾರ್ಮಿಕ ಆಯುಕ್ತರ ಮೂಲಕ ಎಲ್ಲಾ ಪರಿಹಾರ ಹೋಗತಕ್ಕಂಥ ವ್ಯವಸ್ಥೆಯಿತ್ತು. ಅದನ್ನು ವಿಕೇಂದ್ರೀಕರಣ ಮಾಡಿ ಜಿಲ್ಲಾ ಮಟ್ಟದಲ್ಲಿರುವ ಕಾರ್ಮಿಕ ಅಧಿಕಾರಿಗೆ ಆ ಅಧಿಕಾರವನ್ನು ಹಸ್ತಾಂತರ ಮಾಡಿದ್ದೇವೆ. ಹೀಗಾಗಿ ತ್ವರಿತವಾಗಿ ಅದನ್ನು ವಿಲೇ ಮಾಡಲಿಕ್ಕೆ ಕ್ರಮ ವಹಿಸುತ್ತೇವೆ. ನಮ್ಮ ಇನ್ನೋರ್ವ ಸ್ನೇಹಿತರಾದ ಮಾನ್ಯ ಸಿ.ಟಿ. ರವಿಯವರು, ಪರಿಹಾರ ಕೊಡುವಾಗ 50 ಸಾವಿರ ಕೊಡುತ್ತೀರಿ, 4–5 ಸಾವಿರ ಕೊಡುತ್ತೀರಿ ಎಂದು ಪ್ರಸ್ತಾಪಿಸಿದರು. ಕಟ್ಟಡ ಕಾರ್ಮಿಕನಲ್ಲದ ನೋಂದಾಯಿತರಲ್ಲದ ಕಾರ್ಮಿಕ ಮೃತಪಟ್ಟರೆ exgratia ಪರಿಹಾರ 50 ಸಾವಿರ ಕೊಡುವ ವ್ಯವಸ್ಥೆ ಕಾನೂನಿನಲ್ಲಿದೆ. ಇದು ಭಾರತ ಸರ್ಕಾರದ ಕಾನೂನಿನಡಿಯಲ್ಲಿ ನಡೆಯತಕ್ಕಂಥ ಮಂಡಳಿ. ಹೀಗಾಗಿ ನೋಂದಾಯಿತ ಕಟ್ಟಡ ಕಾರ್ಮಿಕ ಮೃತಪಟ್ಟರೆ 2 ಲಕ್ಷ ಪರಿಹಾರ ಕೊಡತಕ್ಕಂಥ ವ್ಯವಸ್ಥೆ ನಮ್ಮಲ್ಲಿ ಇದೆ. ಮಾನ್ಯ ಸಿ.ಟಿ. ರವಿಯವರೇನು ಪ್ರಸ್ತಾಪಿಸಿದ್ದಾರೆ, ಅದನ್ನು ಪರಿಶೀಲಿಸುತ್ತೇನೆ.

ಶ್ರೀ ತನ್ವೀರ್ ಸೇಠ್:– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಅಸಂಘಟಿತ ವಲಯದ ಕಾರ್ಮಿಕರ ಬಗ್ಗೆ ಗಮನ ಸೆಳೆದರು. ನಮ್ಮಲ್ಲಿ ಕರ್ನಾಟಕ ಕಾರ್ಮಿಕರ ಮಂಡಳಿ ಏನು ಇದೆ, ಇದರಲ್ಲಿ ದರ್ಜಿಗಳಿಗೆ ಇರಬಹುದು, mechanic ಗಳಿಗೆ ಇರಬಹುದು, ಬೇರೆ ಬೇರೆ ವಲಯಗಳನ್ನು ಸೃಷ್ಟಿ ಮಾಡಿ ಈ ಹಣವನ್ನು ವಿನಿಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದ ಕಟ್ಟಡ ಕಾರ್ಮಿಕರ ಕಾಯ್ದೆ 1996 ರಲ್ಲಿ ಬಂತು, ನಾವು ರಾಜ್ಯ ಸರ್ಕಾರದಲ್ಲಿ 2005 ರಲ್ಲಿ ಅದನ್ನು ಜಾರಿಗೊಳಿಸಿ ಅದಕ್ಕೆ ನಿಯಾಮಾವಳಿಗಳನ್ನು ಮಾಡಿದೆವು.

ಶ್ರೀ ಪಿ.ಟಿ. ಪರಮೇಶ್ವರನಾಯ್ಕ:– 2007 ರಲ್ಲಿ ಆಯಿತು.

ಶ್ರೀ ತನ್ವೀರ್ ಸೇಠ್:– ಇಲ್ಲ 2005 ರಲ್ಲಿ ಜಾರಿಗೊಳಿಸಿ ಅದಕ್ಕೆ ನಿಯಮಾವಳಿಗಳನ್ನು 2007 ರಲ್ಲಿ ಮಾಡಿದೆವು. ಅಸಂಘಟಿತ ವಯದ ಕಾರ್ಮಿಕರ ವಿಚಾರದಲ್ಲಿ ರಾಜ್ಯ ಸರ್ಕಾರದಲ್ಲಿ ಅನೇಕ ವರದಿಗಳು ಬಂದಿವೆ. Select Committee ಗೂ House Committee ಗೂ ಇದನ್ನು ಕಳುಹಿಸಿದ್ದೆವು, ಅದರಲ್ಲಿ ನಾವೇನು ಮಾಡಿಲ್ಲ. ಹೀಗಾಗಿ ರಾಷ್ಟ್ರ ವ್ಯಾಪ್ತಿಯಲ್ಲಿ ಶೇಕಡ 80 ರಷ್ಟು ಅಸಂಘಟಿತ ವಲಯ ಏನಿದೆ ಅದರ ಕಡೆ ಮಾನ್ಯ ವಿರೋಧ ಪಕ್ಷದ ನಾಯಕರು ಗಮನ ಸೆಳೆದರು. ಕಾರ್ಮಿಕ ಇಲಾಖೆ ಈ ವಿಚಾರದಲ್ಲಿ ಬಹಳ ಮಹತ್ವವಾಗಿ ಕೆಲಸ ಮಾಡಬೇಕಾಗುತ್ತದೆ. ಅದನ್ನು ಮಾಡುವಂಥದ್ದಕ್ಕೆ ಸಲಹೆ ಕೊಡುವುದಕ್ಕೆ ನಾವು ಎಲ್ಲಾ ನಿಮ್ಮ ಜೊತೆಗೆ ನಿಲ್ಲುತ್ತೇವೆ.

ಶ್ರೀ ಪಿ.ಟಿ. ಪರಮೇಶ್ವರನಾಯ್ಕ:– ಅಸಂಘಟಿತ ಕಾರ್ಮಿಕರಲ್ಲಿ 43 ವರ್ಗಗಳನ್ನು ಗುರುತಿಸಿ ಅಸಂಘಟಿತ ಕಾರ್ಮಿಕರ ಪಟ್ಟಿಯನ್ನು ಮಾಡಿದ್ದೇವೆ. ಮಾನ್ಯ ತನ್ವೀರ್ ಸೇಠ್ ರವರು ಹಿಂದೆ ಕಾರ್ಮಿಕ ಸಚಿವರಾಗಿ ಕೆಲಸ ಮಾಡಿದ್ದಾರೆ. ನಾನು ಈ ಬಗ್ಗೆ ಚರ್ಚೆ ಮಾಡುವಾಗ ಅವರನ್ನೂ ಕೂಡ ಆಹ್ವಾನಿಸುತ್ತೇನೆ. ನಮ್ಮ ಹಿರಿಯರಾಗಿರುವ ಜಗದೀಶ್ ಶೆಟ್ಟರ್ ರವರ ಸಲಹೆಯನ್ನು ಕೂಡ ಪಡೆಯುತ್ತೇನೆ. ಅವರ ಸಲಹೆಯನ್ನು ಪಡೆದು ಅಸಂಘಟಿತ ಕಾರ್ಮಿಕರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕೊ ಅದನ್ನು ನಾವು ತೆಗೆದುಕೊಳ್ಳುತ್ತೇವೆ.

ಪ್ರಶ್ನೆ ಸಂಖ್ಯೆ: 66 (1475) ಶ್ರೀ ಎ.ಎಸ್. ನಡಹಳ್ಳಿ (ದೇವರಹಿಪ್ಪರಗಿ)

(ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಉಪನೋಂದಣಾಧಿಕಾರಿಗಳ ಕಛೇರಿ ಸ್ಥಳಾಂತರ

67 (1479); ಶ್ರೀ ವಿಜಯ ಕುಮಾರ್ ಬಿ.ಎನ್. (ಜಯನಗರ)

ಅ) ಜಯನಗರ 4ನೇ ಹಂತದಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಯನ್ನು ಜಯನಗರ ವಾಣಿಜ್ಯ ಸಂಕೀರ್ಣ ಕಟ್ಟಡಕ್ಕೆ ಸ್ಥಳಾಂತರಿಸಲು ಸರ್ಕಾರ ನಿರ್ಧರಿಸಿದೆಯೇ; ಹಾಗಿದ್ದಲ್ಲಿ ಯಾವಾಗ ನಿರ್ಧಾರ ಕೈಗೊಳ್ಳಲಾಯಿತು;